Railway Station at Kyathankeri

472. Sri J. L. KABADE (Ballolli).—

Will the Minister for Public Works and Electricity be pleased to state:—

(*a*) whether the Government has urged the Central Government about the necessity of a railway station on Sholapur-Hubli line at Kyathanakeri ;

(*b*) if so, the action taken by the Government of India in this regard ?

Sri H. M. CHANNABASAPPA.—(Minister for Public Works and Electricity.—

(*a*) Yes.

(*b*) This is being examined by the Railways.

ಶ್ರೀ ಜೆ. ಎಲ್. ಕಬಾಡಿ.— ಕ್ಯಾತನಕೆರೆ ರೈಲ್ವೇಸ್ಟೇಷನ್ ಮಾಡಬೇಕೆಂದು ಸಾರ್ವಜನಿಕರಿಂದ ಬಹಳ ದಿವಸಗಳಿಂದ ಒತ್ತಾಯ ಬಂದಿದೆ. ಇದನ್ನು ಪರಿಶೀಲನೆ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿದೆ ಎಂದು ತಾವು ಹೇಳಿದ್ದೀರಿ. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಉತ್ತರ ಬಂದಿದೆಯೇ ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.— ಉತ್ತರ ಬಂದಿದೆ. ಈ ಸ್ಕೆಟು ಸ್ವಲ್ಪ ಅನಾನುಕೂಲವಾಗಿದೆ. ಅಲ್ಲಿ ಗ್ರೇಡಿಯಂಟ್ ಮತ್ತು ಕರ್ವ್ ಇರುವುದರಿಂದ ಕ್ಯಾತನಕೆರೆ ಹತ್ತಿರ ಮಾಡುವುದಕ್ಕೆ ಆಗುವುದಿಲ್ಲ. 211.83 ಕಿಲೋಮೀಟರ್ ಮೇಲೆ ಒಂದು ಸೂಟಬರ್ ಸ್ಟೇಟ್‌ನಲ್ಲಿ ಮಾಡಬೇಕು ಎಂದಾ ಯೋಚನೆ ಮಾಡುತ್ತಿದ್ದೇನೆ. ಮತ್ತೆ ಅವರಿಂದ ಮೊನ್ನೆತಾನೇ ಉತ್ತರ ಬಂದಿದೆ. ಜನರಲ್ ಮ್ಯಾನೇಜರ್ ತರೀಕ್ಷೆ ಮಾಡುತ್ತಾ ಇದ್ದಾರೆ. ಒಂದು ಫ್ಲಾಗ್ ಸ್ಟೇಷನ್ ಮಾಡಬೇಕು ಎಂದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ?

ಶ್ರೀ ಜೆ. ಎಲ್. ಕಬಾಡಿ.— ಕ್ಯಾತನಕೆರೆ ಹತ್ತಿರವಾಗಲಿ ಅಥವಾ ಅದರ ಸಮೀಪದಲ್ಲಿ ಆಗಲಿ ರೈಲ್ವೇಸ್ಟೇಷನ್ ಮಾಡಿದರೆ ಅಲ್ಲಿ ಹೆಚ್ಚಿಗೆ ವ್ಯವಸಾಯಗಾರರು ಅಂದರೆ ಸೇಂಗಾ ಮತ್ತು ಹೆಣಸಿನಕಾಯಿ ಬೇರೆ ಕಡೆಗೆ ರವಾನಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರಿ. ಆ ಸ್ಥಳದಲ್ಲಿ ಸ್ಟೇಷನ್ ಮಾಡುವುದಕ್ಕೆ ಗ್ರೇಡಿಯಂಟ್ ಅನುಕೂಲವಾಗಿಲ್ಲ ಕರ್ವ್ ಅನುಕೂಲವಾಗಿಲ್ಲ, ಆದುದರಿಂದ ಬೇರೆಕಡೆಗೆ ಮಾಡಬೇಕು ಎನ್ನುವುದು ಸರ್ಕಾರದ ವಿಚಾರದಲ್ಲಿ ಇದೆ.

Conversion of Upper Tunga Project Into Lift Irrigation Scheme

497. Sri K. YENKATAPPPA (Shikaripur).—

Will the Minister of State for Major Irrigation be pleased to state.—

(*a*) whether the Conversion of the Upper Tunga Project into Lift Irrigation scheme is under the consideration of the Government ;

(*b*) if so, the height to which it is proposed to be raised ;